ವಿವೇಕಾನಂದ ಭಾವಧಾರೆ

# ಪರಿಪೂರ್ಣ ಭಕ್ತರಾಗಿ ಸ್ವಾಮಿ ವಿವೇಕಾನಂದರು

ಸ್ವಾಮಿ ಭಜನಾನಂದ

(ಹಿಂದಿನ ಸಂಚಿಕೆಯಿಂದ)



## ಭಕ್ತಿಯ ಬಗ್ಗೆ ಸ್ವಾಮಿ ವಿವೇಕಾನಂದರ ಜಿಜ್ಞಾಸೆ

ಭಕ್ತಿಯ ಬಗೆಗಿನ ಸ್ವಾಮಿ ವಿವೇಕಾನಂದರ ತಾತ್ತ್ವಿಕ ಜಿಜ್ಞಾಸೆಯನ್ನು ಆಧ್ಯಾತ್ಮಿಕ ದೃಷ್ಟಿ ಕೋನದಿಂದ, ಜ್ಞಾನವಿಚಾರದ ದೃಷ್ಟಿಯಿಂದ ಮತ್ತು ಮೌಲ್ಯನಿರ್ಧಾರದ ದೃಷ್ಟಿಯಿಂದ ವಿವರವಾಗಿ ಅಧ್ಯಯನ ಮಾಡುವುದು ಈ ಲೇಖನದ ಪರಿಧಿಗೆ ಮೀರಿದ್ದು ಹಾಗೂ ಅದು ಅಷ್ಟು ಸುಲಭವೂ ಅಲ್ಲ. ಏಕೆಂದರೆ, ಈಗಾಗಲೇ ತಿಳಿಸಿದ ಹಾಗೆ, ಸ್ವಾಮಿ ವಿವೇಕಾನಂದರು ಭಕ್ತಿಯ ಬಗೆಗಿನ ತಮ್ಮ ಅಭಿಪ್ರಾಯಗಳನ್ನು, ಭಕ್ತಿಯೋಗದ ಮೇಲಿನ ತಮ್ಮ ಪ್ರವಚನಗಳಲ್ಲಿ ಮಾತ್ರವೇ ವಿವರಿಸಿ ಹೇಳಿಲ್ಲ, ಹಲವಾರು ಬೇರೆ ಸಂದರ್ಭಗಳಲ್ಲೂ ವ್ಯಕ್ತಪಡಿಸಿದ್ದಾರೆ. ಆದರೂ ಭಕ್ತಿಯ ಕುರಿತಾದ ಅವರ ತಾತ್ತ್ವಿಕ ನಿಲುವಿನ ಬಗ್ಗೆ ಸಂಕ್ಷಿಪ್ತ ಚರ್ಚೆಯೊಂದನ್ನು ಕೈಗೊಳ್ಳುವುದು ಸಾಧುವಾಗಿಯೇ ಇದೆ.

ಭಕ್ತಿಪಂಥಗಳ ನಡುವಣ ಭೇದವು ಮೊದಲು ಕಂಡು ಬರುವುದು, 'ತತ್ತ್ವ'ದ ವಿಚಾರದಲ್ಲಿ, ಅಂದರೆ ಪರಮಾತ್ಮ ಸ್ವರೂಪದ ಬಗ್ಗೆ. ಸ್ವಾಮಿ ವಿವೇಕಾನಂದರು ಭಕ್ತಿ ಮತ್ತು ಜ್ಞಾನಗಳ ನಡುವೆ ಅಷ್ಟೇನೂ ವ್ಯತ್ಯಾಸವಿಲ್ಲ ಎನ್ನುತ್ತಾರೆ. 'ಭಕ್ತಿಯು ಜ್ಞಾನದ ಒಂದು ವಿಶೇಷ ಪ್ರಕಾರವಷ್ಟೇ' ಎಂದು ಶ್ರೀರಾಮಾನುಜರು ಎತ್ತಿತೋರಿಸುತ್ತಾರೆ. ಹಾಗಾದರೆ ಇವೆರಡರ ನಡುವೆ ಇರುವ ವ್ಯತ್ಯಾಸ ಅದಾವುದು? ವ್ಯತ್ಯಾಸ ಇರುವುದು ಮುಖ್ಯವಾಗಿ ಭಗವಂತನೊಡನೆ ಇರುವ ಸಂಬಂಧದ ಕುರಿತಾಗಿ. ಜೀವಿ ಮತ್ತು ಭಗವತ್ತತ್ತ್ವಗಳ ನಡುವಣ ಎರಡು ವಿಭಿನ್ನ ಸಂಬಂಧ ದಿಶೆಗಳನ್ನು ಭಕ್ತಿ ಮತ್ತು ಜ್ಞಾನಗಳು ಪ್ರತಿನಿಧಿಸುತ್ತವೆ. ಭಕ್ತಿಯಲ್ಲಿ, ಮಾರ್ಟಿನ್ ಬ್ಯೂಬರ್ ಹೇಳುವಂತೆ, 'ನಾನು–ನೀನು' ಎಂಬ ಸಂಬಂಧ ಇದೆ. ಜ್ಞಾನದಲ್ಲಿ ಅದು ಇಲ್ಲ. ಪ್ರಸಿದ್ಧವಾದ ಮಹಾವಾಕ್ಯಗಳ ಅಧ್ಯಯನವು ಈ ವ್ಯತ್ಯಾಸವನ್ನು ಸ್ಪಷ್ಟಗೊಳಿಸುತ್ತದೆ. ಉದಾಹರಣೆಗೆ, 'ತತ್ ತ್ವಮ್ ಅಸಿ' ಎಂಬ ಮಹಾವಾಕ್ಯದಲ್ಲಿ, 'ತ್ವಂ' ಎಂದರೆ ಜೀವಿ. ಸಾರ್ವತ್ರಿಕ ಸರ್ವನಾಮವಾದ 'ತತ್' ಎಂದರೆ ಈಶ್ವರ. ಇದು 'ನಾನು–ಅದು' ಸಂಬಂಧದ ಒಂದು ನಿದರ್ಶನ. ಭಕ್ತಿಯಲ್ಲಿರುವ 'ನಾನು–ನೀನು' ಎಂಬ ನೇರ ಸಂಬಂಧವೇ ಅದನ್ನು ಜ್ಞಾನದಿಂದ ಬೇರ್ಪಡಿಸುವ ಅಂಶ. ಈ ಭಾವನೆಯು ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ, ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣನು ನೀಡುವ ಉತ್ತರದಲ್ಲಿ ವ್ಯಕ್ತವಾಗಿದೆ. ಜ್ಞಾನದ ಧ್ಯೇಯವಸ್ತು ನಿರ್ಗುಣ ಅದ್ವೈತತತ್ತ್ವವಾದ ಪರಬ್ರಹ್ಮ. ಭಕ್ತಿಯ ಧ್ಯೇಯವಾದರೋ ಈಶ್ವರನೆಂದು ಕರೆಯಲಾಗುವ ಸಗುಣಬ್ರಹ್ಮ. ಅದಕ್ಕೆಂದೇ ಸ್ವಾಮೀಜಿ, ಭಕ್ತಿಯೋಗವೆಂದರೆ, ಸಗುಣಬ್ರಹ್ಮವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವ ವಿಧಾನವೆಂದು ಎಲ್ಲ ಕಡೆ ಉಲ್ಲೇಖಿಸುತ್ತಾರೆ.

ಸಗುಣ ಮತ್ತು ನಿರ್ಗುಣ ಸ್ವರೂಪಗಳ ಪರಸ್ಪರ ಸಂಬಂಧವೇನು? ಇದಕ್ಕೆ ಸ್ವಾಮೀಜಿ ಹೀಗೆ ಉತ್ತರಿಸುತ್ತಾರೆ: "ಭಕ್ತನು ಆರಾಧಿಸುವ ಸಗುಣ ದೇವರು ಬ್ರಹ್ಮನಿಗಿಂತ ಬೇರೆಯಲ್ಲ ಎನ್ನುವುದನ್ನು ಯಾವಾಗಲೂ ತಿಳಿದುಕೊಂಡಿರಬೇಕು. ಎಲ್ಲವೂ ಆ ಅದ್ವಿತೀಯನಾದ ಬ್ರಹ್ಮವೇ ಆಗಿರುವುದು. ಆದರೆ ಅದ್ವಿತೀಯನೂ ಉಪಾಧಿರಹಿತನೂ ಆದ ಬ್ರಹ್ಮನು ಅತಿ ಗಹನವಾಗಿರುವುದರಿಂದ, ಅವನನ್ನು ಪೂಜಿಸಲು ಆಗುವುದಿಲ್ಲ, ಪ್ರೀತಿಸುವುದಕ್ಕೂ ಆಗುವುದಿಲ್ಲ. ಆದಕಾರಣವೇ ಭಕ್ತರು ಬ್ರಹ್ಮನ ಸೋಪಾಧಿಕರೂಪವಾದ ಈಶ್ವರನನ್ನು ಆಯ್ಕೆಮಾಡಿಕೊಂಡಿದ್ದಾರೆ" (*ಕೃತಿಶ್ರೇಣಿ,* ೧:೯೧).

ಈ ಅಭಿಪ್ರಾಯವು ಅದ್ವೈತದ ಕೇಂದ್ರ ಸಿದ್ಧಾಂತಕ್ಕೆ ಅನುಗುಣವಾಗಿ ಇದ್ದರೂ, ವಿಶಿಷ್ಟಾದ್ವೈತದ ಮುಖ್ಯ ನಿಲುವಿಗೆ ಮತ್ತು ದ್ವೈತವಾದಿ ಮತಗಳ ಬಹುತೇಕ ಸಿದ್ಧಾಂತಗಳಿಗೆ ವಿರುದ್ಧವಾಗಿದೆ. ಅವು ನಿರ್ಗುಣಬ್ರಹ್ಮವು ಮೂಲಭೂತ ಸತ್ಯತತ್ತ್ವವೆಂಬುದನ್ನು ನಿರಾಕರಿಸುತ್ತವೆ. ಸ್ವಾಮಿ ವಿವೇಕಾನಂದರು ಬ್ರಹ್ಮದ ಸಗುಣ ಮತ್ತು ನಿರ್ಗುಣ ಪ್ರಕಾರಗಳೆರಡನ್ನೂ ಒಪ್ಪಿಕೊಳ್ಳುತ್ತಾರೆ. ಹಾಗೆ ಮಾಡುವಾಗ, ಅದ್ವೈತಿಗಳ ಹಾಗೆ ಸಗುಣವು ನಿರ್ಗುಣಕ್ಕಿಂತ ಕೆಳದರ್ಜೆಯದು ಎಂದೇನೂ ಅವರು ಹೇಳುವುದಿಲ್ಲ.

ಸ್ವಾಮಿ ವಿವೇಕಾನಂದರು ಮಾನವಾತ್ಮವು ‘ದಿವ್ಯ’ವಾದುದು ಅಥವಾ ‘ಸುಪ್ತವಾಗಿರುವ ದಿವ್ಯತೆ ಉಳ್ಳದ್ದು’ ಎಂದು ಹೇಳುತ್ತಾರೆ. ಇದರ ಬಗ್ಗೆ ಭಾರತದಲ್ಲಿ ಮತ್ತು ಅದರ ಹೊರಗಡೆ ತುಂಬ ತಪ್ಪು ಅಭಿಪ್ರಾಯವಿದೆ. ಅನೇಕ ಕ್ರೈಸ್ತ ಧರ್ಮಶಾಸ್ತ್ರಜ್ಞರು ಇತ್ತೀಚೆಗೆ ಹಿಂದೂ ತತ್ತ್ವಶಾಸ್ತ್ರದಲ್ಲಿ ಬಹಳ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಅವರಲ್ಲೂ, ಪ್ರಾಟೆಸ್ಟಾಂಟ್ ಪಂಥದವರು ಶ್ರೀರಾಮಾನುಜರ ತಾತ್ತ್ವಿಕ ನಿಲುವುಗಳ ಬಗ್ಗೆ ಆಕರ್ಷಿತರಾಗುತ್ತಿದ್ದರೆ, ಕ್ಯಾಥೊಲಿಕ್ ಪಂಥದವರು ಶ್ರೀಶಂಕರಾಚಾರ್ಯರತ್ತ ಸೆಳೆಯಲ್ಪಡುತ್ತಿದ್ದಾರೆ. ಇದಕ್ಕೆ ಕಾರಣ ಶಂಕರರ ನಿರಪೇಕ್ಷ ತತ್ತ್ವಶಾಸ್ತ್ರವು ಸಂತ ಥಾಮಸ್ ಅಕ್ವಿನಾಸ್‌ನ ತಾತ್ತ್ವಿಕ ನಿಲುವುಗಳಿಗೆ ಹತ್ತಿರವಾಗಿರುವುದು. ಕೆಲವರು ಕ್ಯಾಥೊಲಿಕ್ ದೈವಶಾಸ್ತ್ರಜ್ಞರು ಅದ್ವೈತಾನುಭೂತಿಯ ಸಾಧ್ಯತೆಯನ್ನು ಕೂಡ ಒಪ್ಪಿಕೊಳ್ಳಲು ತಯಾರಾಗಿದ್ದಾರೆ. ಆದರೆ, ಮನುಷ್ಯನ ವಿಷಯದಲ್ಲಿ ‘ದಿವ್ಯತೆ’ ಎಂಬ ಪದವನ್ನು ಉಪಯೋಗಿಸುವುದಕ್ಕೆ ಅವರು ಆಕ್ಷೇಪವೆತ್ತುತ್ತಾರೆ.

ಈ ತಪ್ಪು ಕಲ್ಪನೆಗೆ ಮುಖ್ಯ ಕಾರಣವೇನೆಂದರೆ, ಸರಿಯಾದ ಲಕ್ಷ್ಯಾರ್ಥವನ್ನು ತೋರುವಲ್ಲಿ, God ಮತ್ತು Divine ಈ ಇಂಗ್ಲಿಷ್ ಪದಗಳ ಸೀಮಿತತೆ. ಈ ಪದಗಳನ್ನು ಸ್ವಾಮೀಜಿ ಹೆಚ್ಚಿನ ಸ್ಪಷ್ಟತೆಗಾಗಿ ಹಾಗೂ ಭಾವನಾತ್ಮಕ ಮತ್ತು ವಾಗ್ವೈಖರಿಯ ಪ್ರಭಾವಕ್ಕಾಗಿ ಆಗಾಗ್ಗೆ ಉಪಯೋಗಿಸುತ್ತಾರೆ. ಪ್ರತಿಯೊಬ್ಬ ಮನುಷ್ಯನೂ ಸುಪ್ತದೈವವೆಂದು ಅವರು ಹೇಳುವಾಗ, ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ದಿನ ಈ ವಿಶ್ವದ ಮಹಾನ್ ಒಡೆಯನಾಗುವನೆಂಬುದು ಅವರ ಅಭಿಪ್ರಾಯವಾಗಿರಲಿಲ್ಲ. ಈ ಬಗೆಯ ಸಾಧ್ಯತೆಯನ್ನು ಬ್ರಹ್ಮಸೂತ್ರ ಮತ್ತು ಅದರ ಮೇಲಿನ ಭಾಷ್ಯಗಳು ನಿರ್ದುಷ್ಟವಾಗಿ ತಳ್ಳಿಹಾಕಿವೆ. ತಮ್ಮ ‘ಯುಕ್ತಿ ಮತ್ತು ಧರ್ಮ’ ಪ್ರವಚನದಲ್ಲಿ ಸ್ವಾಮೀಜಿ, ‘ಆತ್ಮನಲ್ಲಿ ಸುಪ್ತವಾಗಿರುವ ದಿವ್ಯತೆ’ ಎಂದರೆ ಏನು ಅನ್ನುವದರ ಬಗ್ಗೆ ಹೀಗೆ ವಿವರಣೆಯನ್ನು ಕೊಡುತ್ತಾರೆ:

**“ವೇದಾಂತವು ನಾನು ನೀನು ಎಲ್ಲವೂ ಬ್ರಹ್ಮ ಎಂದು ಹೇಳಿದರೆ, ಅದು ಸಗುಣದೇವರಿಗೆ ಸಂಬಂಧಿಸಿದುದಲ್ಲ. ಉದಾಹರಣೆಗಾಗಿ, ಒಂದು ಜೇಡಿ ಮಣ್ಣಿನ ರಾಶಿಯಿಂದ ದೊಡ್ಡದೊಂದು ಆನೆಯನ್ನು ಮಾಡಿದ್ದಾರೆ ಎಂದಿಟ್ಟುಕೊಳ್ಳಿ, ಅದೇ ಮಣ್ಣಿನ ರಾಶಿಯಿಂದ ಸಣ್ಣದೊಂದು ಇಲಿಯನ್ನು ಕೂಡ ಮಾಡಿರುವರು. ಮಣ್ಣಿನ ಇಲಿ ಎಂದಾದರೂ ಮಣ್ಣಿನ ಆನೆಯಾಗಬಲ್ಲುದೇ? ಆದರೆ ಅವೆರಡನ್ನೂ ನೀರಿಗೆ ಹಾಕಿದರೆ, ಅವೆರಡೂ ಜೇಡಿಮಣ್ಣಾಗುತ್ತವೆ. ಮಣ್ಣಿನ ದೃಷ್ಟಿಯಿಂದ ಅವೆರಡೂ ಒಂದೇ. ಆದರೆ ಇಲಿಯ ಮತ್ತು ಆನೆಯ ದೃಷ್ಟಿಯಿಂದ ಎಂದೆಂದಿಗೂ ವ್ಯತ್ಯಾಸ ಇದ್ದೇ ಇರುತ್ತದೆ. ಅನಂತವಾದ ನಿರ್ಗುಣವೇ ಜೇಡಿಮಣ್ಣಿನಂತೆ. ನಾವು ಪರಮೇಶ್ವರ ಇಬ್ಬರೂ ಒಂದೇ. ಆದರೆ ಅಭಿವ್ಯಕ್ತಿಯ ದೃಷ್ಟಿಯಿಂದ ನೋಡಿದಾಗ, ಮಾನವರಾದ ನಾವು ಅವನ ಭಕ್ತರು, ಅವನ ನಿತ್ಯ ಭೃತ್ಯರು, ಅವನ ಆರಾಧಕರು”** (*ಕೃತಿಶ್ರೇಣಿ*, ೬: ೩೯೦).

“ಈ ಪ್ರಪಂಚದ ಹಲವು ಭಾವನೆಗಳೆಲ್ಲವೂ ಅದರ ಭಿನ್ನ ಭಿನ್ನ ಅಭಿವ್ಯಕ್ತಿಗಳು. ಮಾನವನ ಬುದ್ಧಿಯು ಗ್ರಹಿಸಬಲ್ಲ ನಿರ್ಗುಣ ಬ್ರಹ್ಮನ ಶ್ರೇಷ್ಠ ಭಾವನೆಯೇ ಸಗುಣ” (*ಕೃತಿಶ್ರೇಣಿ*, ೬:೩೮೯).

“ನಾವು ನೀವುಗಳೆಲ್ಲ ಅತಿ ಅಲ್ಪ ಅಭಿವ್ಯಕ್ತಿಗಳು. ಸಗುಣ ಈಶ್ವರನೇ ನಾವು ಊಹಿಸಬಹುದಾದ ಶ್ರೇಷ್ಠ ಕಲ್ಪನೆ. ನಾನೋ, ನೀವೋ ಎಂದಿಗೂ ಆ ದೇವರಾಗಲಾರೆವು” (*ಕೃತಿಶ್ರೇಣಿ*, ೬:೩೯೦).

ಸೆಮಿಟಿಕ್ ಧರ್ಮಗಳಲ್ಲಿ ದೇವರು ಎಂದರೆ ಸಗುಣದೇವರೇ ಆಗಿದ್ದಾನೆ. ಬಾಗ್ದಾದಿನ ಆಲ್-ಹಲ್ಲಾಜ್ ಎಂಬ ಸೂಫೀ ಅನುಭಾವಿಯು ‘ಅನಾಲ್-ಹಖ್’ (‘ನಾನೇ ಸತ್ಯ’) ಎಂದು ಘೋಷಿಸಿಕೊಂಡನು. ಆಗ ತನ್ನನ್ನೇ ಪೂಜಿಸಿಕೊಂಡನೆಂಬ ಆರೋಪವನ್ನು ಅವನ ಮೇಲೆ ಹೊರಿಸಿ, ಅವನನ್ನು ಚಿತ್ರಹಿಂಸೆ ಕೊಟ್ಟು ಕೊಲ್ಲಲಾಯಿತು. ಹಾಗೂ, ಮಾನವನ ದೈವತ್ವ ಸಿದ್ಧಾಂತವನ್ನು ತೆಗೆದುಕೊಂಡು ಸ್ವಾಮೀಜಿಯೇನಾದರೂ ಐವತ್ತು ವರ್ಷಗಳಿಗೆ ಮುಂಚೆ ಅಮೆರಿಕದ ನೆಲದಲ್ಲಿ ಕಾಲಿರಿಸಿದ್ದರೆ, ಇದೇ ರೀತಿಯ ಅವಸ್ಥೆ ಕಾದಿರುತ್ತಿತ್ತು ಎಂದು ರಾಬರ್ಟ್ ಇಂಗರ್‌ಸಾಲ್ ಅವರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದನು. ಆದರೆ ಜೀವಿಯು ಸಗುಣದೇವರಿಗೆ ಸಮಾನವೆಂದಾಗಲಿ, ಅವರಿಬ್ಬರೂ ಒಂದೇ ಎಂದಾಗಲಿ ಸ್ವಾಮೀಜಿ ಎಲ್ಲಿಯೂ ಹೇಳಿಲ್ಲ. “ನಾನೇ ಭಗವಂತ” ಅಥವಾ “ಭುವಿಯ ಮೇಲಿನ ಓ ದೇವತಾಸ್ವರೂಪಿಗಳೇ” ಎಂದು ಅವರು ಘೋಷಿಸಿದಾಗ, ನಿರಪೇಕ್ಷ ನಿರ್ಗುಣ ತತ್ತ್ವವಾದ ಬ್ರಹ್ಮನಲ್ಲಿ ವ್ಯಷ್ಟಿ ಜೀವಾತ್ಮಗಳು ಐಕ್ಯವಾಗುತ್ತವೆ ಎನ್ನುವ ಅಭಿಪ್ರಾಯವೇ ಧ್ವನಿತವಾಗಿತ್ತು.

ಸಗುಣ ದೇವತಾರೂಪದ ಬಗ್ಗೆ ಮೂರು ಪ್ರಮುಖವಾದ ಸಿದ್ಧಾಂತಗಳಿವೆ: ಅವುಗಳೆಂದರೆ, **ಅವತಾರತತ್ತ್ವ, ಭಗವತ್ಕೃಪಾತತ್ತ್ವ** ಮತ್ತು **ಕೆಡುಕಿನ ಸಮಸ್ಯೆ**. ಭಗವಂತನು ಈ ಭೂಮಿಯಲ್ಲಿ ಮತ್ತೆ ಮತ್ತೆ ಅವತಾರವೆತ್ತುತ್ತಾನೆ ಎನ್ನುವುದು ಪ್ರಾಚೀನ ಹಿಂದೂಗಳ ನಂಬಿಕೆ. ಇದನ್ನು ಭಗವದ್ಗೀತೆಯಲ್ಲಿ ಅಧಿಕೃತವಾಗಿ ಹೇಳಲಾಗಿದೆ. ಮಧ್ಯಕಾಲೀನ ಯುಗದ ಸಂತರ ಪ್ರಭಾವದಿಂದ ಹಿಂದೂ ಜನಾಂಗದ ನಂಬಿಕೆಗಳಲ್ಲಿ ಈ ಸಿದ್ಧಾಂತವು ಮುಖ್ಯವಾದ ಪಾತ್ರವನ್ನು ಪಡೆದುಕೊಂಡಿತಾದರೂ, ಹಿಂದೂ

ಆಚಾರ್ಯರಿಂದಾಗಲಿ ಅಥವಾ ತತ್ತ್ವಶಾಸ್ತ್ರಜ್ಞರಿಂದಲಾಗಲಿ ಸಾಕಷ್ಟು ಪ್ರಾಧಾನ್ಯತೆಯನ್ನು ಎಂದಿಗೂ ಪಡೆಯಲಿಲ್ಲವೆಂದೇ ಹೇಳಬೇಕು. ಪ್ರಸ್ತುತ ಇದು ತತ್ತ್ವಶಾಸ್ತ್ರ, ಪುರಾಣ ಮತ್ತು ಧರ್ಮಗಳ ಸಂಗಮಸ್ಥಾನದಲ್ಲಿ ತೇಲಾಡುವಂತೆ ಇದೆ. ಅದಕ್ಕೆ ವಿರುದ್ಧವಾಗಿ, ಕ್ರೈಸ್ತ ಧರ್ಮದಲ್ಲಿ ಅವತಾರ ತತ್ತ್ವವು ದೈವಶಾಸ್ತ್ರದ (theology) ಒಂದು ಪ್ರತ್ಯೇಕ ಅಂಗವೇ ಆಗಿಬಿಟ್ಟಿದೆ. ಇದನ್ನು ಕ್ರಿಸ್ಟಾಲಜಿ (christology) ಎಂದು ಕರೆಯುತ್ತಾರೆ. ಈ ವಿಷಯದ ಬಗ್ಗೆ ಸಾವಿರಾರು ಪುಸ್ತಕಗಳು ಕೂಡ ರಚಿತವಾಗಿವೆ.

## ಅವತಾರತತ್ತ್ವ

ಶ್ರೀಶಂಕರಾಚಾರ್ಯರ ದೃಷ್ಟಿಯಲ್ಲಿ ಅವತಾರವು ನೈಜವಾದುದಲ್ಲ, ತೋರಿಕೆ ಮಾತ್ರ. ಶ್ರೀಕೃಷ್ಣನ ವಿಷಯದಲ್ಲಿ, ಭಗವಂತನು ದೇವಕಿಯ ಗರ್ಭದಲ್ಲಿ ಹುಟ್ಟಿದಂತೆ ತೋರಿಕೊಂಡನು ಎಂದು ಅವರು ಬರೆಯುತ್ತಾರೆ. ಶ್ರೀರಾಮಾನುಜರ ಪ್ರಕಾರ, ಒಂದು ಅವತಾರ ಎನ್ನುವುದು ಭಗವಂತನ ವಿಭೂತಿಯಷ್ಟೆ. ವಿಭೂತಿಯೆನ್ನುವುದು ಭಗವಂತನ ಐದು ಸ್ವರೂಪಗಳಲ್ಲಿ ಒಂದು. ಉಳಿದವೆಂದರೆ, **ಪರಾ, ವ್ಯೂಹ, ಅಂತರ್ಯಾಮಿನ್** ಮತ್ತು **ಅರ್ಚಾ**. ಶ್ರೀಚೈತನ್ಯ ಮತ್ತು ವಲ್ಲಭಾಚಾರ್ಯರು ಶ್ರೀಕೃಷ್ಣನಲ್ಲಿ ಪರಮದೈವತಾ ರೂಪವನ್ನು ಕಾಣುತ್ತಾರೆ. ಶ್ರೀರಾಮನ ವಿಷಯದಲ್ಲೂ ಇದೇ ರೀತಿಯ ತಾದಾತ್ಮ್ಯವನ್ನು 'ಅಧ್ಯಾತ್ಮ ರಾಮಾಯಣ' ದಲ್ಲಿ ಕಾಣಬಹುದು. ಇದನ್ನೇ ತುಲಸೀದಾಸರು ತಮ್ಮ 'ರಾಮಚರಿತ ಮಾನಸ' ಗ್ರಂಥದ ಮೂಲಕ ಪ್ರಚುರಪಡಿಸಿದರು. ಬೌದ್ಧ ಮತದ ಮಹಾಯಾನ ಶಾಖೆಯ ಕೆಲವು ಪಂಗಡಗಳು ಕೂಡ ಬುದ್ಧನ ವಿಷಯದಲ್ಲಿ ಇಂಥದೇ ಅಭಿಪ್ರಾಯವನ್ನು ಹೊಂದಿವೆ. ಆದರೆ ಒಟ್ಟಾರೆ ಬೌದ್ಧರು ನಂಬುವುದು 'ಜನ್ಯೇಶ್ವರ' ನನ್ನು ಅಂದರೆ, ಹಿಂದೆ ಒಬ್ಬ ಮಾನವನಾಗಿದ್ದು, ಆಧ್ಯಾತ್ಮಿಕ ಸಾಧನೆಯ ಮೂಲಕ ದೈವತ್ವವನ್ನು ಪಡೆದವನನ್ನು. ಆಧುನಿಕ ಹಿಂದೂಧರ್ಮದಲ್ಲಿ ಅವತಾರಪುರುಷರಾಗಿ ಶ್ರೀರಾಮಕೃಷ್ಣರ ಆವಿರ್ಭಾವವು ಒಂದು ಆದರ್ಶದ ಮತ್ತು ಕೆಲವು ಉದಾತ್ತ ಮೌಲ್ಯಗಳ ಪ್ರಕಟಣಾರೂಪವಾಗಿದೆ. ಹೀಗೆ ಅದು ಸಾಂಪ್ರದಾಯಿಕ ಅವತಾರಗಳಿಗಿಂತ ಭಿನ್ನವಾಗಿದ್ದು, ಅವತಾರಗಳ ಬಗೆಗಿನ ಇಡೀ ಪ್ರಶ್ನೆಯನ್ನು ಪುನರಾಲೋಕಿಸುವ ಆವಶ್ಯಕತೆಯನ್ನು ತಂದೊಡ್ಡಿದೆ. ಸ್ವಾಮಿ ಶಾರದಾನಂದರು ತಮ್ಮ ಮಹೋನ್ನತ ಕೃತಿಯಾದ 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ದಲ್ಲಿ ಈ ದಿಕ್ಕಿನಲ್ಲಿ ಕಾರ್ಯವೆಸಗಿದ್ದಾರೆ. ರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳಾದ ಸ್ವಾಮಿ ತಪಸ್ಯಾನಂದಜಿ ಅವರು ಇತ್ತೀಚಿಗೆ ಅವತಾರದ ಸಮಸ್ಯೆಗೆ ಒಂದು ಪ್ರಮುಖವಾದ ವಿವರಣೆಯನ್ನು ನೀಡಲು ಯತ್ನಿಸಿದ್ದಾರೆ. ಅವರ ಪ್ರಕಾರ ಅವತಾರವೆಂದರೆ ಭಗವಂತನ ಅನುಗ್ರಹಶಕ್ತಿಯ ವಿಶೇಷ ಅಭಿವ್ಯಕ್ತಿಯೇ ಆಗಿದೆ. ಇದೇ ವೇಳೆಗೆ ಅನೇಕ ಕ್ರೈಸ್ತ ದೈವಶಾಸ್ತ್ರಜ್ಞರು ಒಂದು ವಿಚಿತ್ರವಾದ ಅಭಿಪ್ರಾಯದೊಂದಿಗೆ ಮುಂದೆ ಬಂದಿದ್ದಾರೆ. ಅದೇಂದರೆ, ಹಿಂದೂ ಧರ್ಮದಲ್ಲಿ ಕಾಣುವುದು ಅವತಾರ ತತ್ತ್ವದ ಮೊಳಕೆಗಳನ್ನಷ್ಟೆ ಎನ್ನುವುದು. ಭಗವಂತನ ಪೂರ್ಣ ಪ್ರಕಟಣೆಯನ್ನು ಏಸುಕ್ರಿಸ್ತನಲ್ಲಿ ಪಡೆದುಕೊಳ್ಳಲು ಹಿಂದೂಧರ್ಮವು ಸಿದ್ಧವಾಗಿರಬೇಕು ಎನ್ನುವುದನ್ನು ಇದು ಸೂಚಿಸುತ್ತದೆ.

> **ದೇವರಿಗೆ ಮಾನವನ ದುರ್ಬಲತೆ ಗೊತ್ತಿದೆ. ಮಾನವಕೋಟಿಯ ಹಿತಕ್ಕಾಗಿ ಅವನು ಮಾನವ ಜನ್ಮಧಾರಣೆ ಮಾಡುವನು. ಭಗವಾನ್ ಶ್ರೀರಾಮಕೃಷ್ಣರು ಹೀಗೆ ಹೇಳುವರು: "ಸಾಗರದಿಂದ ಪ್ರಚಂಡ ಅಲೆಯೊಂದು ಬಂದಿತೆಂದರೆ ಹತ್ತಿರವಿರುವ ಸಣ್ಣಪುಟ್ಟ ಹಳ್ಳಕೊಳ್ಳಗಳೆಲ್ಲವೂ ಯಾವ ಪ್ರಯತ್ನವೂ ಇಲ್ಲದೆ ತುಂಬಿ ತುಳುಕಾಡುವುವು. ಇದರಂತೆಯೇ ಒಂದು ಅವತಾರ ಜನ್ಮವೆತ್ತಿದಾಗ ಪ್ರಚಂಡ ಆಧ್ಯಾತ್ಮಿಕ ತರಂಗ ಬಂದು ಜಗತ್ತಿನ ಮೇಲೆ ಬೀಳುವುದು. ಸುತ್ತಮುತ್ತಲೂ ಆಧ್ಯಾತ್ಮಿಕತೆಯು ತುಂಬಿ ತುಳುಕಾಡುವುದನ್ನು ಜನರು ಆಗ ನೋಡುವರು."**
>
> **– ಸ್ವಾಮಿ ವಿವೇಕಾನಂದ**

ಹೀಗಾಗಿ, ಈ ಸಮಸ್ಯೆಯ ಬಗ್ಗೆ ಸ್ವಾಮಿ ವಿವೇಕಾನಂದರ ಅಭಿಪ್ರಾಯ ಏನು ಎನ್ನುವುದು ಆಸಕ್ತಿಕರವಾದ ವಿಷಯವೇ ಸರಿ. ಒಂದು ಪ್ರಶ್ನೆಗೆ ಉತ್ತರವಾಗಿ ಸ್ವಾಮೀಜಿ ಒಮ್ಮೆ ಹೀಗೆ ಉತ್ತರಿಸುತ್ತಾರೆ: "ಅವತಾರಗಳು ಕಪಾಲಮೋಚನರು ಅಂದರೆ ಅವರು ಜನರ ಅದೃಷ್ಟವನ್ನು ಬದಲಿಸಬಲ್ಲರು. ಅವರು ಇಡೀ ಪ್ರಪಂಚವನ್ನೇ ಅಲುಗಾಡಿಸಬಲ್ಲರು. ಅತ್ಯಂತ ಕಡಿಮೆ ಅಪಾಯಕಾರಿಯೂ ಶ್ರೇಷ್ಠ ಆರಾಧನಾ ವಿಧಾನವೂ ಯಾವುದೆಂದರೆ, ಮಾನವನನ್ನು ಪೂಜಿಸುವುದು" (*ಕೃತಿಶ್ರೇಣಿ,* ೧:೪೫೦). ಸಾಧಾರಣ ವರ್ಗಕ್ಕೆ ಸೇರಿದ ಎಂಥ ಮಹಾತ್ಮ ಕೂಡ, ಅವನೆಷ್ಟೇ ಆಧ್ಯಾತ್ಮಿಕವಾಗಿ ಮುಂದುವರಿದಿದ್ದರೂ, ಲಕ್ಷಾಂತರ ಜನರನ್ನು ಅನುಗ್ರಹಿಸುವ ಈ ಅಪೂರ್ವ ಶಕ್ತಿಯನ್ನು ಪಡೆದಿರುವನೆಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ಪ್ರಾಚೀನ ಯಹೂದಿ ಧರ್ಮದ ಪ್ರಕಾರ, ನರಕದ ಅಂಧಕಾರದಲ್ಲಿ ಕೊಳೆಯುವ ಪಾಪಿಗಳನ್ನು ಅನುಗ್ರಹಿಸುವ ಶಕ್ತಿ ಇರುವುದು ಭಗವಂತನಿಗೆ ಮಾತ್ರ. ಅದಕ್ಕೆಂದೇ, "ನಿನ್ನ ಪಾಪಗಳನ್ನು ಕ್ಷಮಿಸಲಾಗಿದೆ.... ಶಾಂತನಾಗಿ ಹೋಗು" ಎಂದು ಏಸುಕ್ರಿಸ್ತನು ಕೆಲವರಿಗೆ ಹೇಳಿದಾಗ, ಯಹೂದಿಗಳು "ಪಾಪಗಳನ್ನೂ ಕ್ಷಮಿಸುವ ಇವನ್ಯಾರು?" ಎಂದು ಅಚ್ಚರಿಪಡುತ್ತಾರೆ. ವಿವೇಕಾನಂದರ ಪ್ರಕಾರ ಲಕ್ಷಾಂತರ ಜನರ ಅದೃಷ್ಟದಲ್ಲಿ ಮಧ್ಯ ಪ್ರವೇಶಿಸಬಲ್ಲವನೇ ಅವತಾರಪುರುಷ ಎನ್ನಿಸಿಕೊಳ್ಳುತ್ತಾನೆ.

ಭಗವತ್ತತ್ತ್ವಕ್ಕೂ ಅವತಾರಕ್ಕೂ ಇರುವ ದೈವಿಕ ಸಂಬಂಧವನ್ನು ಸ್ವಾಮೀಜಿ ಸ್ಪಷ್ಟಪಡಿಸಿಲ್ಲ. ಆದರೆ ಅವತಾರವನ್ನು ಭಗವಂತನ

ಅತ್ಯಂತ ಶ್ರೇಷ್ಠ ಮಾನವೀಯ ಅಭಿವ್ಯಕ್ತಿಯಾಗಿ ಕಾಣುವ ಪ್ರಾಯೋಗಿಕ ಆವಶ್ಯಕತೆಯನ್ನು ಒತ್ತಿಹೇಳುತ್ತಾರೆ. ಅವತಾರವೆತ್ತಿದ ಮಹಾನ್ ಆಚಾರ್ಯರು ಮತ್ತು ಭಗವದವತಾರಗಳ ನಡುವಣ ಅಂತರವನ್ನು ಎತ್ತಿತೋರಿಸುತ್ತ ಅವರು ಹೀಗೆ ಹೇಳುತ್ತಾರೆ:

**"ಸಾಧಾರಣ ಗುರುಗಳಿಗಿಂತ ಮೇಲಿನ ಘಟ್ಟದಲ್ಲಿರುವ ಪರಮಶ್ರೇಷ್ಠರಾದ ಒಂದು ಬಗೆಯ ಗುರುಗಳಿದ್ದಾರೆ. ಭಗವಂತನ ಅವತಾರಗಳು ಅವರು. ಅವರು ಮತ್ತೊಂದು ಜೀವಿಗೆ ಆಧ್ಯಾತ್ಮಿಕತೆಯನ್ನು ಸ್ಪರ್ಶಮಾತ್ರದಿಂದ ಮತ್ತು ಇಚ್ಛಾಮಾತ್ರದಿಂದ ಅನುಗ್ರಹಿಸಬಲ್ಲರು.. ಅವರೇ ಗುರುಗಳ ಗುರುಗಳು; ಮಾನವನ ಮೂಲಕ ವ್ಯಕ್ತವಾಗುತ್ತಿರುವ ಭಗವಂತನ ಅಭಿವ್ಯಕ್ತಿಗಳೇ ಅವರು.. ಮಾನವನಾಗಿ ಕಾಣಿಸಿಕೊಂಡಲ್ಲದೆ ದೇವರನ್ನು ಯಾರೂ ನಿಜವಾಗಿ ನೋಡಲಾರರು. ಬೇರೆ ವಿಧವಾಗಿ ಅವನನ್ನು ನೋಡಲು ಪ್ರಯತ್ನಿಸಿದರೆ ನಾವು ಬೇರೊಂದು ಹಾಸ್ಯಾಸ್ಪದ ವಿಕಾರ ರೂಪವನ್ನು ಕಲ್ಪಿಸಿಕೊಳ್ಳುವೆವು. ಅದು ಮೂಲಕ್ಕಿಂತ ಮೇಲಿನದಾಗಿರುವುದಿಲ್ಲ" (*ಕೃತಿಶ್ರೇಣಿ,* ೧:೨೦೭).**

ಶ್ರೀರಾಮಕೃಷ್ಣರು ಅಂತಹ ಅವತಾರ ಎಂದು ಸ್ವಾಮೀಜಿ ಪರಿಗಣಿಸಿದ್ದರು. ಅವರ ಬಗ್ಗೆ ಸ್ವಾಮೀಜಿ ಹೀಗೆ ಹೇಳುತ್ತಾರೆ: "..ಪರಮಹಂಸರಂಥ ಪರಮ ಪರಿಪೂರ್ಣರು ಜಗತ್ತಿನಲ್ಲಿ ಈ ಹಿಂದೆ ಯಾವಾಗಲೂ ಬಂದಿರಲಿಲ್ಲ. ಸಂಸಾರದ ಘೋರಾಂಧ ಕಾರದಲ್ಲಿ ಈ ಮಹಾಪುರುಷರೇ ಜ್ಯೋತಿಸ್ತಂಭರೂಪರಾಗಿದ್ದಾರೆ. ಇದರ ಬೆಳಕಿನಲ್ಲಿಯೇ ಈಗ ಮನುಷ್ಯನು ಸಂಸಾರಸಮುದ್ರದ ದಡವನ್ನು ಸೇರಬಲ್ಲನು" (*ಕೃತಿಶ್ರೇಣಿ,* ೮:೪೬).

ಸ್ವಾಮೀಜಿ ಇನ್ನೊಂದು ಧಾರ್ಮಿಕ ಪಂಗಡ ಸೃಷ್ಟಿಯಾಗು ವುದನ್ನು ತಡೆಯಲು ಇಚ್ಛಿಸಿದ್ದರು. ಹಾಗೆಯೇ ವೇದಾಂತದ ತತ್ತ್ವಗಳೆಡೆಗೆ ಜನರ ಗಮನವನ್ನು ಸೆಳೆಯಲು ಕೂಡ ಇಷ್ಟಪಟ್ಟಿದ್ದರು. ಅದಕ್ಕಾಗಿಯೇ ಅವರು ಶ್ರೀರಾಮಕೃಷ್ಣರು ಅವತಾರಪುರುಷರು ಎಂಬ ವಿಷಯವನ್ನು ಮುಕ್ತವಾಗಿ ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ವ್ಯಕ್ತಪಡಿಸಲಿಲ್ಲ. ಆದರೆ ಅದು ಅವರ ದೃಢ ನಂಬಿಕೆಯಾಗಿತ್ತು. ಆ ನಂಬಿಕೆ ಅವರ ವ್ಯಕ್ತಿತ್ವವನ್ನು ಮತ್ತು ದೃಷ್ಟಿಕೋನವನ್ನು ಅಸಾಧಾರಣ ರೀತಿಯಲ್ಲಿ ಪ್ರಭಾವಗೊಳಿಸಿತ್ತು. ಇದನ್ನು ಅವರು ಹಲವಾರು ಪ್ರಸಂಗಗಳಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ ಕೂಡ.

### ಭಗವತ್ಕೃಪಾತತ್ತ್ವ

ನಾವೀಗ ಸಗುಣದೇವರ ಬಗೆಗಿನ ಎರಡನೆಯ ಸಿದ್ಧಾಂತವಾದ ಭಗವತ್ಕೃಪಾತತ್ತ್ವದ ಬಗ್ಗೆ ವಿಚಾರ ಮಾಡೋಣ. ಒಬ್ಬರು ಒಮ್ಮೆ ಸ್ವಾಮಿ ವಿವೇಕಾನಂದರನ್ನು ಕೇಳಿದರು, "ಭಗವಂತನ ಕೃಪೆಯಿಲ್ಲದೆ ಮೋಕ್ಷವನ್ನು ಪಡೆಯಲಾದೀತೆ?" ಅದಕ್ಕೆ ಅವರ ಉತ್ತರ ಹೀಗಿತ್ತು, "ಮೋಕ್ಷವು ದೇವರಿಗೆ ಸಂಬಂಧಿಸಿದ್ದೇ ಅಲ್ಲ. ಈಗಾಗಲೇ ಸ್ವಾತಂತ್ರ್ಯವಿದ್ದೇ ಇದೆ." ಆದರೆ ಇನ್ನೊಂದು ಸಂದರ್ಭದಲ್ಲಿ, ಮುಕ್ತಿ ಮತ್ತು ಆನಂದಗಳು ತಮ್ಮ ಗುರುದೇವರಾದ ಶ್ರೀರಾಮಕೃಷ್ಣರ ಪದತಲಗಳಲ್ಲಿಯೇ ಬಿದ್ದಿರುವುದು ಎಂದು ಅವರು ಕಣ್ಣೀರುಗರೆಯುತ್ತ ಹೇಳುತ್ತಾರೆ. ಮೇಲಿನೆರಡು ಹೇಳಿಕೆಗಳಲ್ಲಿ ವಿರೋಧಾಭಾಸವಿದೆ ಎಂದು ತಿಳಿದು ಕೊಳ್ಳಬಾರದು. ಕೃಪಾಶಕ್ತಿಯನ್ನು ಏಕಮಾತ್ರ ಸಗುಣದೇವನಲ್ಲಿ ಕಾಣುವ ಪ್ರಯತ್ನವನ್ನು ಮಹಾನ್ ಜಾಗತಿಕ ಧರ್ಮಗಳಲ್ಲಿ ನಾವು ಕಾಣಬಹುದು. ಇದರ ಪ್ರಮುಖ ದೌರ್ಬಲ್ಯವೆಂದರೆ, ಮಾನವನ ಅಸ್ತಿತ್ವದಲ್ಲಿ ಅವಿನಾಭಾವವಾಗಿ ಕಾಣಬರುವ ಕೆಡುಕಿನ ಸಮಸ್ಯೆಗೆ ಅದರಲ್ಲಿ ಸಮಾಧಾನಕರವಾದ ಪರಿಹಾರ ಸಿಕ್ಕುವುದಿಲ್ಲ. ಭಗವತ್ಕೃಪೆಯ ಬಗೆಗಿನ ಸ್ವಾಮಿ ವಿವೇಕಾನಂದರ ಅಭಿಪ್ರಾಯಗಳಾದರೋ, ಅದ್ವೈತ ಸಿದ್ಧಾಂತವನ್ನು ಆಧರಿಸಿದ ಕೃಪಾತತ್ತ್ವಕ್ಕೆ ಹೆಚ್ಚು ಕಡಿಮೆ ಹೊಂದಾಣಿಕೆಯಾಗುತ್ತವೆ.

ಮಾನವನ ಪ್ರಾರ್ಥನೆಗೆ ಅಥವಾ ಆವಶ್ಯಕತೆಗೆ ಭಗವಂತನ ಪ್ರತಿಕ್ರಿಯೆಯೇ ಕೃಪೆ ಅನ್ನಿಸಿಕೊಳ್ಳುತ್ತದೆ. ಅಂತಹ ಪ್ರತಿಕ್ರಿಯೆಯು ನಿರ್ದಿಷ್ಟ ವ್ಯಕ್ತಿಯ ಸ್ವಂತ ವ್ಯವಹಾರಗಳಲ್ಲಿ ಭಗವಂತನ ಮಧ್ಯಸ್ಥಿಕೆಗೆ ಎಡೆಮಾಡಿಕೊಡುವುದು. ಇದನ್ನು ಮನಸ್ಸು ಮತ್ತು ವಾಕ್ಕುಗಳಿಗೆ ಅತೀತವಾದ ಅತೀಂದ್ರಿಯ ತತ್ತ್ವವು ಮಾಡುತ್ತದೆ ಎಂದು ಹೇಳಲಾಗದು. ಆದ್ದರಿಂದ ಪ್ರಾರ್ಥನೆಯನ್ನು ಪರಬ್ರಹ್ಮನಿಗೆ ಸಲ್ಲಿಸಲಾಗದು. ಸಂತಪ್ತ ಸ್ತ್ರೀಪುರುಷರಿಗೆ ಸಹಾಯಹಸ್ತವನ್ನು ಚಾಚಲು ಸೂಕ್ಷ್ಮ ಶರೀರಗಳಲ್ಲಿ ನಿಂದಿರುವ ಅವತಾರಗಳು ಮತ್ತು ಸಿದ್ಧಪುರುಷರಂತಹ ದೇವತಾರೂಪಗಳಿಗೆ ಮಾತ್ರವೇ ಪ್ರಾರ್ಥನೆಯನ್ನು ಸಲ್ಲಿಸಬಹುದು. ನಾವು 'ಕೃಪೆ' ಎಂದು ಕರೆಯುವುದು, ಈ ಪುಣ್ಯಜೀವಿಗಳು ಲೋಕಕಲ್ಯಾಣಕ್ಕಾಗಿ ಹೊರಹೊಮ್ಮಿಸುವ ಶಕ್ತಿಯನ್ನೇ. ಈ ಅಂಶವನ್ನು ತಮ್ಮ 'ಯುಕ್ತಿ ಮತ್ತು ಧರ್ಮ' ಎಂಬ ಪ್ರವಚನದಲ್ಲಿ ಸ್ವಾಮೀಜಿ ಸ್ಪಷ್ಟವಾಗಿ ವಿವರಿಸುತ್ತಾರೆ. ಆ ಮೂಲಕ ಅವರು, ರೋಮನ್ ಕ್ಯಾಥೊಲಿಕ್ ಸಂಪ್ರದಾಯದಲ್ಲಿರುವ ಸಂತರ ಆರಾಧನೆ ಹಾಗೂ ದೇವಾಲಯಗಳಲ್ಲಿರುವ ಮೂರ್ತಿಗಳನ್ನು ಪೂಜಿಸುವ ಹಿಂದೂ ಪೂಜಾವಿಧಾನಗಳನ್ನು ಸಮರ್ಥಿಸುತ್ತಾರೆ. ಇನ್ನೊಂದು ಸಂದರ್ಭದಲ್ಲಿ, ತಮ್ಮ ಶಿಷ್ಯ ಶರತ್ ಚಂದ್ರ ಚಕ್ರವರ್ತಿ ಅವರ ಜೊತೆಗಿನ ಸಂಭಾಷಣೆಯಲ್ಲಿ ಕೃಪಾತತ್ತ್ವದ ಬಗ್ಗೆ ಸ್ವಾಮೀಜಿ ಇನ್ನೂ ಬಿಡಿಸಿಹೇಳುತ್ತಾರೆ:

**ಸ್ವಾಮೀಜಿ:** ಕೃಪೆ ಅಂದರೆ ಇದು: ಯಾರಿಗೆ ಆತ್ಮಸಾಕ್ಷಾತ್ಕಾರವಾಗಿದೆಯೋ ಅವನು ಬಹು ದೊಡ್ಡ ಶಕ್ತಿಯ ಭಂಡಾರವಾಗಿರುವನು. ಆತನನ್ನು ಕೇಂದ್ರವಾಗಿಟ್ಟುಕೊಂಡು ಒಂದು ವೃತ್ತವನ್ನೆಳೆದರೆ, ಯಾರು ಆ ವೃತ್ತದೊಳಗೆ ಬರುವರೋ ಅವರು ಆತನ ಅಭಿಪ್ರಾಯಗಳ ಆಕರ್ಷಣೆಗೆ ಒಳಗಾಗುವರು. ಹಾಗೆಯೇ ಹೆಚ್ಚು ಧಾರ್ಮಿಕ ಪ್ರಯತ್ನವಿಲ್ಲದೆಯೇ ಆತನಲ್ಲಿ ಸಂಗ್ರಹವಾಗಿರುವ ಅದ್ಭುತ ಆಧ್ಯಾತ್ಮಿಕ ಶಕ್ತಿಯ ಫಲವನ್ನು ಹೊಂದುವರು.

**ಶಿಷ್ಯ:** ಇದಕ್ಕಿಂತ ಹೆಚ್ಚಿನ ಕೃಪೆ ಇಲ್ಲವೇ?

**ಸ್ವಾಮೀಜಿ:** ಇದೆ.. ಲಕ್ಷಾಂತರ ಜೀವಿಗಳನ್ನು ಅಜ್ಞಾನದಿಂದ ಉದ್ಧಾರ ಮಾಡಿ ಅವರಿಗೆ ಇದೇ ಜನ್ಮದಲ್ಲಿಯೇ ಮುಕ್ತಿ ನೀಡಲು ಅವತಾರಪುರುಷರಿಗೆ ಮಾತ್ರವೇ ಸಾಧ್ಯ. ಇದಕ್ಕೇ ಕೃಪೆ ಎನ್ನುತ್ತಾರೆ. ನಿನಗೆ ಅರ್ಥವಾಯಿತೇ? (*ಕೃತಿಶ್ರೇಣಿ,* ೮:೨೩೮)

ಭಗವತ್ಕೃಪೆಯ ಬಗ್ಗೆ ಮೇಲೆ ಹೇಳಿರುವ ಅಭಿಪ್ರಾಯವು ಪರಿಪೂರ್ಣವಾದುದಲ್ಲ. ಅದರಲ್ಲಿ ಕೃಪೆಯ ಇನ್ನಿತರ ವಿಧಾನಗಳ ಪ್ರಸ್ತಾಪ ಕಂಡುಬರುವುದಿಲ್ಲ. ಆದ್ದರಿಂದ ಇದನ್ನು ಒಂದು ಹಂತದಿಂದಾಚೆಗೆ ಸಾಮಾನ್ಯೀಕರಿಸುವುದಕ್ಕೆ (generalization) ಆಗುವುದಿಲ್ಲ. ಸ್ವಾಮೀಜಿಯವರು ಪ್ರಮುಖವಾಗಿ ಮಹತ್ವಕೊಡುವುದು ಸ್ವಪ್ರಯತ್ನಕ್ಕೆ. ಅದನ್ನು ಯುಕ್ತವಾದ ರೀತಿಯಲ್ಲಿ ಕೈಗೊಂಡಾಗ, ಅವಶ್ಯಕವಾಗಿರುವ ಪ್ರತಿಕ್ರಿಯೆಯು ವಿಶ್ವಗರ್ಭದಲ್ಲಿರುವ ಯಾವುದೋ ಆಕರದಿಂದ ಬಂದೇ ಬರಬೇಕು ಎಂದು ಅವರು ತಿಳಿದಿದ್ದರು. ಅಂತಹ ಪ್ರತಿಕ್ರಿಯೆಯು ಆಧ್ಯಾತ್ಮಿಕ ಜಗತ್ತಿನ ಅಜ್ಞಾತ ನಿಯಮಗಳ ಪ್ರಕಾರ ಮೂಡಿಬರುವುದು. ಅದನ್ನು ನಾವು ಯಾವ ಹೆಸರಿನಿಂದ ಬೇಕಾದರೂ ಕರೆಯಬಹುದು.

ನಾವು ಇಲ್ಲಿ ಒಂದು ಅಂಶವನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ಆತ್ಮದ ಬಗೆಗಿನ ಸ್ವಾಮಿ ವಿವೇಕಾನಂದರ ಉದಾರ ಹಾಗೂ ವ್ಯಾಪಕ ಪರಿಕಲ್ಪನೆಯಲ್ಲಿ ವ್ಯಷ್ಟಿ ಜೀವಿ ಮತ್ತು ಬ್ರಹ್ಮಾಂಡಗಳನ್ನು ಬೇರ್ಪಡಿಸುವ ಸೂಕ್ಷ್ಮ ವ್ಯತ್ಯಾಸಗಳು ಅಸ್ಪಷ್ಟವಾಗಿವೆ ಅಥವಾ ಕೆಲವೊಮ್ಮೆ ಅದೃಶ್ಯವೇ ಆಗಿಬಿಟ್ಟಿವೆ. ಅದೆಷ್ಟರ ಮಟ್ಟಿಗೆ ಎಂದರೆ, ಸ್ವಪ್ರಯತ್ನ ಮತ್ತು ಅನುಗ್ರಹ – ಇವುಗಳ ನಡುವಣ ವಿಭಿನ್ನತೆಯು ತನ್ನ ಅಭೇದ್ಯ ದೈವಶಾಸ್ತ್ರೀಯ ಪರಿಣಾಮಗಳಲ್ಲಿ ಬಹಳಷ್ಟನ್ನು ಕಳೆದುಕೊಂಡುಬಿಡುತ್ತದೆ. ಬೇಲೂರು ಮಠದಲ್ಲಿ ಜರುಗಿದ ಸಂಭಾಷಣೆಯೊಂದರಲ್ಲಿ ಈ ವಿಷಯದ ಬಗ್ಗೆ ಸ್ವಾಮೀಜಿಯೇ ಪ್ರಸ್ತಾಪ ಮಾಡುತ್ತಾರೆ:

**ಪ್ರಶ್ನೆ:** ನಾವು ನಮ್ಮ ಮೇಲೆಯೇ ನಿರ್ಭರರಾಗಿರಬೇಕು ಎಂಬ ವಿಶ್ವಾಸದ ಮಾತಿನ ನಿಜವಾದ ಅರ್ಥವೇನು?

**ಉತ್ತರ:** ಇಲ್ಲಿ ಆತ್ಮವೆಂದರೆ ನಿತ್ಯವಾದ ಆತ್ಮ, ಅನಿತ್ಯವಾದ ತನ್ನತನದ ಮೇಲಿನ ಅವಲಂಬನೆ ಕೂಡ ನಿಧಾನವಾಗಿ ಸರಿಯಾದ ಧ್ಯೇಯದತ್ತ ಕರೆದುಕೊಂಡು ಹೋಗುತ್ತದೆ. ಏಕೆಂದರೆ (ಅನಿತ್ಯವೆಂದು ಭಾವಿಸುವ) ಜೀವಾತ್ಮವು ಮೋಹಕ್ಕೆ ಒಳಪಟ್ಟಿರುವ ನಿತ್ಯಾತ್ಮವಲ್ಲದೆ ಬೇರೆಯಲ್ಲ" (Complete Works, Vol V, 314).

(ಮುಂದುವರಿಯುವುದು)

## ‘ವಚನವೇದ’ ವನ್ನು ಕುರಿತು ರಾಷ್ಟ್ರಕವಿ ಕುವೆಂಪು

ಶ್ರೀರಾಮಕೃಷ್ಣರ ಹೆಸರು ಜಗದ್‌ವ್ಯಾಪಿಯಾಗುವಂತೆಯೂ ಅವರ ಉಪದೇಶಾಮೃತ ಲೋಕದ ಹೃದಯಕ್ಕೆ ಪ್ರವಹಿಸುವಂತೆಯೂ ಮಾಡಿದ ಮಹಾವ್ಯಕ್ತಿಗಳಲ್ಲಿ ಇಬ್ಬರು ಕಲಶಪ್ರಾಯವಾಗಿದ್ದಾರೆ. ಅವರಲ್ಲಿ ಒಬ್ಬರು ವಿಖ್ಯಾತನಾಮರು, ಮತ್ತೊಬ್ಬರು ಅಜ್ಞಾತರು ಅಥವಾ ಅನಾಮರು. ಸ್ವಾಮಿ ವಿವೇಕಾನಂದ ಮತ್ತು ‘ಮ’! ಒಂದು, ಆಕಾಶದಲ್ಲಿ ತೊಳಗುವ ಸೂರ್ಯ, ಮತ್ತೊಂದು ಮನೆಮನೆಯ ಹೃದಯದ ಗುಡಿಯಲ್ಲಿ ಬೆಳಗುವ ಹಣತೆ, ನಂದಾದೀಪ. ಕತ್ತಲೆಯಲ್ಲಿ ಭಾಸ್ಕರನಿಲ್ಲದ ವೇಳೆಯಲ್ಲಿಯೂ ತಂಪಿನ ಕಾಂತಿ ಶಾಂತಿಗಳನ್ನು ಕಣ್ಣು ಕೋರೈಸದಂತೆ ನಿರಾಡಂಬರವಾಗಿ ನೀಡುವ ಸೊಡರು, ಮುದ್ದುಸೊಡರು, ತಾಯ್ತನದ ಸೊಡರು, ಹಣತೆ ಸೊಡರು! ಆತನು ತನ್ನ ಪೂರ್ಣನಾಮದಿಂದ ಪ್ರಪಂಚದ ಸಂತೆಬಯಲಿಗೆ ಬರಲು ನಾಚಿ, ಹೇಸಿ, ಹೆದರಿ, ‘ಮ’ ಎಂಬ ಮೊದಲಕ್ಕರದಿಂದ ಮಾತ್ರ ತೆರೆಮರೆಯಿಂದ ಇಣುಕಿದ ಎಲೆಮರೆಯ ಮಿಣುಕು ಹೂ!

ಆದರೆ ಎಲ್ಲಕ್ಕೂ ಮೊದಲಾಗಿ, ಎಲ್ಲಕ್ಕೂ ಮಿಗಿಲಾಗಿ, ಎಲ್ಲರಿಗಿಂತಲೂ ಹಿರಿದಾಗಿ, ಇತರರಾರಿಂದಲೂ ಸಾಧ್ಯವಿಲ್ಲದಷ್ಟು ವಿವರವಾಗಿ, ಬರೆದ ಇತರರೆಲ್ಲರಿಗೂ ಮೂಲಾಧಾರ ಗ್ರಂಥವಾಗುವಂತೆ ಸಕಲ ವಿಷಯ ಸವಿಸ್ತಾರವಾಗಿ, ಹಿಂದಿಲ್ಲ ಮುಂದೆ ಬರುವುದಿಲ್ಲವೆಂಬಂತೆ ಆಶ್ಚರ್ಯಕರವಾಗಿ, ಪಂಡಿತಪಾಮರ ಸರ್ವಸುಲಭ ಸ್ವರಸವಾಗಿ ಶ್ರೀರಾಮಕೃಷ್ಣ ಪರಮಹಂಸರ ಸ್ವಂತ ಸಹಜ ದಿವ್ಯವಾಣಿಯೆ ಲೋಕಕಲ್ಯಾಣಾರ್ಥವಾಗಿ ಮೂರ್ತಿಮತ್ತಾಗಿರುವಂತೆ ಅವರ ವಚನವೇದವನ್ನು ಲೋಕಕ್ಕೆ ಅನುಗ್ರಹಿಸಿದವರೆಂದರೆ ‘ಕಥಾಮೃತ’ ಕರ್ತೃ ಶ್ರೀ ‘ಮ’! ‘ಮ’ ಅವರಿಗೆ ತಾನು ಯಾವ ಪ್ರಮಾಣದಲ್ಲಿ ಋಣಿಯಾಗಿದ್ದೇನೆ ಎಂಬುವುದಿನ್ನೂ ಜಗತ್ತಿಗೆ ಸಂಪೂರ್ಣವಾಗಿ ಅರಿವಾಗಿಲ್ಲ. ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣ ಮಹಾಸಂಘದ ಸಂಸ್ಥಾಪನೆ ಮಾಡಿದುದಕ್ಕೆ ಸಮಸಂವಾದಿಯಾಗಿ, ಹೆಗಲೆಣೆಯಾಗಿ ನಿಲ್ಲುತ್ತದೆ ‘ಮ’ ಅವರ ಶ್ರೀರಾಮಕೃಷ್ಣ ವಚನವೇದ ಮೇರುಕೃತಿ!

ಅಷ್ಟೆ ಅಲ್ಲ, ಅದಕ್ಕಿಂತಲೂ ಚಿರಸ್ಥಾಯಿ ಎಂದಾದರೂ ಹೇಳಬಹುದು. ಒಮ್ಮೆ ಬೇಲೂರು ಮಠದ ಒಂದು ಮರದಡಿಯಲ್ಲಿ ಅಡ್ಡಾಡುತ್ತಿದ್ದಾಗ ಸ್ವಾಮಿ ವಿವೇಕಾನಂದರು ಹೇಳಿದರಂತೆ, “ಇಂದು ಇಲ್ಲಿ ಸ್ಥಾಪಿತವಾದ ಸಂಘರೂಪದ ಶಕ್ತಿ ಇನ್ನು ಐನೂರು ವರ್ಷಗಳವರೆಗೂ ಚ್ಯುತಿಯಿಲ್ಲದೆ ಅವ್ಯಾಹತವಾಗಿ ಮುಂದುವರಿಯುತ್ತದೆ” ಎಂದು. ನಮಗನ್ನಿಸುತ್ತದೆ, ‘ಮ’ ಅವರ ಈ ಮೇರುಕೃತಿ ಮನುಷ್ಯತ್ವವಿರುವವರೆಗೆ, ಅದು ದೇವತ್ವವನ್ನು ಬಯಸುತ್ತಿರುವವರೆಗೆ ಚಿರಸ್ಥಾಯಿಯಾಗಿ, ಜೀವಂತ ಶಕ್ತಿಯಾಗಿರುತ್ತದೆ ಎಂದು. ಕಟ್ಟಡ ಸಂಸ್ಥೆಗಳು ಕಾಲವಶವಾಗಿ ಗತಿಸಬಹುದು: ಸರಸ್ವತಿ ಅಮರೆ!

ಈ ವಚನವೇದ ವೇದಗಳೂ ಮಾಡದ ಕೆಲಸವನ್ನು ಮಾಡುತ್ತದೆ. ಈ ವಚನವೇದ ವೇದಗಳೂ ಹೋಗಲಾರದ, ಬಹುಶಃ ಕೆಲವರ ದೃಷ್ಟಿಯಲ್ಲಿ ಹೋಗಬಾರದ, ಮೂಲೆಮೂಲೆಗಳನ್ನು ಪ್ರವೇಶಿಸಿ ಜ್ಯೋತಿರ್ದಾನ ಮಾಡುತ್ತದೆ. ಈ ‘ವಚನವೇದ’ ಅಂಧಶ್ರದ್ಧೆಯ ಮೂಢಾಚಾರದ ಜನಜಂಗುಳಿಯನ್ನು ಪುರೋಹಿತ ನಖಪಂಜರದಿಂದ ಪಾರುಮಾಡಿ, ಅವರ ಧರ್ಮದಾಸ್ಯದೈನ್ಯಗಳನ್ನು ಪರಿಹರಿಸಿ, ಅವರನ್ನು ಮನುಷ್ಯರನ್ನಾಗಿ ಮಾಡುತ್ತದೆ. ಈ ‘ವಚನವೇದ’ ಪ್ರಜ್ಞಾಪರಾಧಜನ್ಯವಾದ ಭಯ ಭೀತಿಗಳಿಂದಲೂ ‘ನೀಚೋಽಹಂ, ಉಚ್ಚೋಽಹಂ’ ಎಂಬ ಮನೋಜಟಿಲಗಳಿಂದಲೂ ನಮ್ಮನ್ನುದ್ಧರಿಸಿ, ಉದಾರಧೀರರನ್ನಾಗಿ ಮಾಡಿ, ಸಂರಕ್ಷಿಸುತ್ತದೆ, ಜೀವನ್ಮುಕ್ತಿಗೆ ನಡೆಸುತ್ತದೆ.